## ಸೂಪರ್ ದಂಪತಿಯ ವಿರೂಪಕ!

ಕಲರ್ಸ್ ಸೂಪರ್‌ನ 'ಸೂಪರ್ ದಂಪತಿ' ನಿರೂಪಕ ಮುರಳಿ ಬಾಯಿಯಿಂದ ಅಶ್ಲೀಲ ಮಾತುಗಳು ಹೊರಡುತ್ತಿವೆ. ಬಹುಶಃ ನಿರೂಪಕರಿಗೆ ಮಾತಿನ ಮೇಲೆ ಹಿಡಿತ ಇಲ್ಲದಿರಬಹುದೇ? ಕಾರ್ಯಕ್ರಮದಲ್ಲಿ ಬಂದ ಸಂಭಾಷಣೆಯೊಂದು ಹೀಗಿದೆ.

ಮುರಳಿ: ಯಾಕಮ್ಮಾ ಇವರನ್ನು ಮದುವೆಯಾದೆ?

ಮಹಿಳೆ: ನೋಡೋಣ ಅಂತ ಮದುವೆಯಾದೆ.

ಮುರಳಿ: ಏನನ್ನು ನೋಡೋಣ ಅಂತ?.... ಹೀಗೆ...

ಮಹಿಳೆ: (ನಾಚಿಕೆಯಿಂದ ತಲೆ ತಗ್ಗಿಸುತ್ತಾ) ಊಹ್ಞೂ....

ಮುರಳಿ: ಎಷ್ಟು ಮಕ್ಕಳು ನಿಮಗೆ?

ಮಹಿಳೆ: ಇನ್ನೂ ಆಗಿಲ್ಲ.

ಮುರಳಿ: ಮತ್ತೆ ಮಕ್ಕಳಾಗೋಕೆ ಹೇಗೆ ಸಾಧ್ಯ? ತೋರ್ಸಪ್ಪಾ... ಇದು ಸೂಪರ್ ದಂಪತಿಯ ನಿರೂಪಕರ ಬಾಯಿಯಿಂದ ಉದುರಿದ ಅಣಿಮುತ್ತು.

ಇಂತಹ ಅಶ್ಲೀಲ ಮಾತುಗಳನ್ನು ವಾಹಿನಿಯವರೇ ನಿರೂಪಕರ ಬಾಯಿಯಿಂದ ಆಡಿಸುತ್ತಾರೆ ಎಂಬ ಆರೋಪವಿದೆ. ವಾಹಿನಿಯವರು ಒತ್ತಾಯಿಸಿದರೆಂದು ನಿರೂಪಕರು ಇಂತಹ ಅಶ್ಲೀಲ ಮಾತುಗಳನ್ನು ಆಡುತ್ತಾ ದಂಪತಿಗಳನ್ನು ಅವಹೇಳನ ಮಾಡಬಹುದೇ? ನಿರೂಪಕರು ನಿರೂಪಣೆ ಮಾಡುವಾಗ ಕೇವಲ ಒಳ ಉಡುಪನ್ನು ಮಾತ್ರ ಧರಿಸಬೇಕು ಎಂದು ಷರತ್ತು ಹಾಕಿದರೆ ನಿರೂಪಕರು ಒಪ್ಪುತ್ತಾರೆಯೇ? ಖಂಡಿತಾ ಇಲ್ಲ ಅಲ್ಲವೇ? ಇಂತಹ ಕಾರ್ಯಕ್ರಮಗಳನ್ನು ನೋಡುತ್ತಿದ್ದರೆ ಕಿರುತೆರೆಗೂ ಸೆನ್ಸಾರ್ ಮಂಡಳಿಯ ಅವಶ್ಯಕತೆ ಇದೆ ಎಂದು ಅನಿಸುವುದಿಲ್ಲವೇ?

—ಪಿ.ಜೆ. ರಾಘವೇಂದ್ರ ಮೈಸೂರು

## ಶುಭ ಉದಯ

ಚಂದನದಲ್ಲಿ ಮೂಡಿ ಬರುತ್ತಿರುವ 'ಶುಭೋದಯ ಕರ್ನಾಟಕ' ಒಳ್ಳೆಯ ಕಾರ್ಯಕ್ರಮ. ಆದರೆ ಅದು ಪ್ರಸಾರವಾಗುವ ಆ ಸಮಯದಲ್ಲಿ ನಾವು ಸ್ನಾನ, ತಿಂಡಿಯನ್ನು ತಿಂದು, ನಿತ್ಯದ ಕೆಲಸಕ್ಕೆ ಹೋಗುವ ತರಾತುರಿಯಲ್ಲಿ ಇರುತ್ತೇವೆ. ಹೀಗಿರುವಾಗ ಹೇಗೆ ಟೀವಿಯ ಮುಂದೆ ಕುಳಿತುಕೊಳ್ಳಲು ಸಾಧ್ಯ? ಗೃಹಿಣಿಯರಿಗೂ ಆ ಹೊತ್ತು ಸರಿಯಾಗುವುದಿಲ್ಲ. ದಯವಿಟ್ಟು ಆ ಕಾರ್ಯಕ್ರಮವನ್ನು ಸಂಜೆ ವೇಳೆ ಮರು ಪ್ರಸಾರ ಮಾಡಿ ಎನ್ನುವುದು ಮನವಿ.

ಸಾಕಷ್ಟು ಹಿರಿಯ ಸಾಧಕರಿದ್ದಾರೆ. ಅವರಿಗೆಲ್ಲಾ ಒಂದು ಅವಕಾಶ ಕೊಡಬಹುದು. ಈಗ ಸಂದರ್ಶಿಸುವ ಕೆಲವು ಸಾಧಕರ ಸಾಧನೆ ಅಷ್ಟೇನೂ ಗುಣಮಟ್ಟದಲ್ಲಿ ಇಲ್ಲ ಎಂದು ಅನ್ನಿಸಿದೆ.

—ಅರುಣಾ, ಬೆಂಗಳೂರು

ವಾರದ ಪತ್ರ

## ರೀಮೇಕ್ ಮೋಹಿನಿ

ಝೀ ಕನ್ನಡದ 'ಯಾರೇ ನೀ ಮೋಹಿನಿ' ತಮಿಳಿನ 'ಯಾರಡಿ ನೀ ಮೋಹಿನಿ'ಯ ರೀಮೇಕ್. ಮೂಲ ಕತೆಯೇ ಸತ್ವವಿಲ್ಲದ ಮತ್ತು ವಿಶೇಷತೆ ಇಲ್ಲದ ಒಂದು ಕೆಟ್ಟ ಧಾರಾವಾಹಿ. ಅದನ್ನು ಕನ್ನಡದಲ್ಲಿ ತರುತ್ತಿರುವ ಅಗತ್ಯ ಏನಿದೆಯೋ? ಅಸ್ವಾಭಾವಿಕ ಪಾತ್ರಗಳೊಂದಿಗೆ, ಸಾಮಾನ್ಯ ಅನುಭವಕ್ಕೆ ವಿರುದ್ಧವಾದ ಪೂರ್ವಾಪರ ವಿವೇಚನೆ ಇಲ್ಲದೆ ಕತೆಯನ್ನು ನಿರೂಪಿಸಲಾಗಿದೆ. ಯಾವ ಪಾತ್ರಗಳಲ್ಲೂ ಬದ್ಧತೆಯಿಲ್ಲ. ಹೇಗೆಂದರೆ ಹಾಗೆ ತಿರುಚುವ ಪಾತ್ರಗಳು. ಕಲವೇ ಕಂತುಗಳಲ್ಲಿ ಮುಗಿಯಬಹುದಾದ ಕತೆಯನ್ನು ನೂರಾರು ಕಂತುಗಳು ಮುಗಿದರೂ ಇನ್ನೂ ಎಳೆಯಲಾಗುತ್ತಿದೆ.

ಇಲ್ಲಿ ಕತೆ ಮುಂದುವರಿಯುವುದಿಲ್ಲ. ಬೋರ್ ಎನಿಸುವ ದೃಶ್ಯಗಳನ್ನು ಪ್ರೇಕ್ಷಕನ ಯಾವ ಕರ್ಮಗೇಡಿತನಕ್ಕೆ ತೋರಿಸುತ್ತಾರೋ ಗೊತ್ತಿಲ್ಲ. ಯಾವೊಂದು ದೃಶ್ಯಗಳು ನೋಡುಗರ ಮನ ತಟ್ಟುವುದಿಲ್ಲ. ಅಸಂಬದ್ಧ ಸನ್ನಿವೇಶ ಒಂದು ಹೀಗಿದೆ: 'ಬೆಳ್ಳಿ ಎಂಬ ಪಾತ್ರಕ್ಕೆ ವಿಷ ಕುಡಿಸಿ ನಂತರ ಅವಳನ್ನು ನೆಲದಲ್ಲಿ ಹೂತು ಹಾಕುತ್ತಾರೆ, ನಂತರ ಹರಿಣಿ ಪಾತ್ರಧಾರಿ ಅವಳನ್ನು ಹುಡುಕಿಕೊಂಡು, ಹೂತು ಹಾಕಿರುವ ಜಾಗಕ್ಕೆ ಬರುತ್ತಾಳೆ' (ಅಲ್ಲಿಗಾಗಲೆ ಎಷ್ಟೋ ಗಂಟೆಗಳಾಗಿರುತ್ತದೆ) ಅನುಮಾನದಿಂದ ಕೈಯಲ್ಲೇ ಮಣ್ಣನ್ನು ಬಗೆದು ನೋಡಿದಾಗ ಬೆಳ್ಳಿಯ ದೇಹ ಇರುತ್ತದೆ. ಮೆಲಕ್ಕೆ ಎತ್ತಿ 'ಬೆಳ್ಳಿ ಎಂದಾಕ್ಷಣ, ಬೆಳ್ಳಿ ಕಣ್ಣು ತೆರೆದು ಮಾತನಾಡುತ್ತಾಳೆ! ಇಂತಹ ದೃಶ್ಯಗಳು ಸೀರಿಯಲ್‌ನಲ್ಲಿ ಹಲವಾರು. ಇಂತಹ ಅರ್ಥಹೀನ ಧಾರಾವಾಹಿಯ ಅಗತ್ಯ ಇದೆಯಾ?

—ಕೆ. ರಾಜಶೇಖರ ಹೊಣಕೆರೆ ಬೆಂಗಳೂರು

## ಸಮಾಜಮುಖಿ

ಕಲರ್ಸ್‌ನ 'ಕೋಟ್ಯಧಿಪತಿ' ಉತ್ತಮವಾಗಿ ಮೂಡಿಬರುತ್ತಿದೆ. ನಟ ಜಗ್ಗೇಶ್ ಮತ್ತು ಸಂಸದರಾದ ಪ್ರತಾಪಸಿಂಹ ಹಾಗೂ ತೇಜಸ್ವಿ ಸೂರ್ಯ ಅವರೊಂದಿಗಿನ ಕಾರ್ಯಕ್ರಮ ಮನಸೂರೆಗೊಂಡಿತು. ಜಗ್ಗೇಶ್ ತಮ್ಮ ಎಂದಿನ ಚುರುಕು ಸಂಭಾಷಣೆ ನಟನಾ ಕೌಶಲ್ಯ ದಿಂದ ಮನರಂಜಿಸಿದರು. ಮಳೆ ನೀರು ಸಂಗ್ರಹಣೆಯ ಅಭಿಯಾನಕ್ಕಾಗಿ ಬಹುಮಾನದ ಹಣ ವಿನಿಯೋಗಿಸುವ ಕಾಳಜಿ ವ್ಯಕ್ತಪಡಿಸಿದರು. ಇನ್ನು ಯುವ ಸಂಸದರು ತಮ್ಮ ಅನುಭವಗಳೊಂದಿಗೆ, ಸಾಮಾನ್ಯ ಜ್ಞಾನವನ್ನೂ ಹಂಚಿಕೊಂಡರು.

—ಗೀತಾ ನೆಲ್ಲೀಕಾಯಿ

## ಮರುನಾಮಕರಣ ಸೂಕ್ತ

'ಕಲರ್ಸ್ ಸೂಪರ್' ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಟಿ.ಎನ್. ಸೀತಾರಾಂ, ಅವರ ಧಾರಾವಾಹಿ 'ಮಗಳು ಜಾನಕಿ'ಯನ್ನು 'ಶ್ಯಾಮಲಾ ಅತ್ತೆ' ಎಂದು ಮರುನಾಮಕರಣ ಮಾಡಿದರೆ ಸೂಕ್ತವೆನಿಸಬಹುದು. ಕಾರಣ, 'ಶ್ಯಾಮಲಾ ಅತ್ತೆ' ಪಾತ್ರಧಾರಿ, ಧಾರಾವಾಹಿಯ ಇನ್ನಿತರ ಪಾತ್ರಧಾರಿಗಳಿಗೆ ಬೆಸುಗೆಯಾಗಿದ್ದಾರೆ. ಎಲ್ಲಾ ವಿಷಯಗಳು ಅವರ ಗಮನಕ್ಕೆ ಬರುವುದರಿಂದ, ಅವರು ಪಾತ್ರಧಾರಿಗಳಿಗೆ ಸಾಂತ್ವನ ನೀಡುವುದರಿಂದ (ಹಲವು ಸಲ ಬುದ್ಧಿವಾದವೂ ಸೇರಿದಂತೆ), ಧಾರಾವಾಹಿಗೆ ಮೂಲಕೊಂಡಿ ಎನ್ನಬಹುದು. ಅವರ ಗಂಡನ ಪಾತ್ರಧಾರಿ ಚುರುಕಿಲ್ಲಾ ಹಾಗೂ ಅಸಂಬದ್ಧ ಕೆಲಸಗಳಲ್ಲಿ ತೊಡಗುವುದರಿಂದ ಹಲವು ಬಾರಿ ಅವರ ಪಾತ್ರ ಧಾರಾವಾಹಿಗೆ ಅತ್ಯವಶ್ಯಕವೆನಿಸುವುದಿಲ್ಲ. ಹಲವು ಬಾರಿ ಆತ ತನ್ನ ಹೆಂಡತಿಯಿಂದ ಮುಖಭಂಗಕ್ಕೆ ಒಳಗಾಗುವುದು ಹಾಸ್ಯಾಸ್ಪದವೆನಿಸುತ್ತದೆ.

—ಸುಂದರ್, ಬೆಂಗಳೂರು

ಹಳೆ ಜಾಡಿನಲ್ಲಿ ಜಾನಕಿ: ಕಲರ್ಸ ಸೂಪರ್‌ನ 'ಮಗಳು ಜಾನಕಿ' ನಿಧಾನವಾಗಿ ತನ್ನ ವಿಶೇಷತೆಯನ್ನು ಕಳೆದು ಕೊಳ್ಳುತ್ತಿದೆ. ಇದರಲ್ಲಿ ಹೊಸತನ ಇರಬಹುದೆಂದು ಬಹಳ ಭರವಸೆ ಇಟ್ಟಿದ್ದೆ. ಆದರೆ ಅದು ಹಳೇ ಜಾಡಿನಲ್ಲಿ ಸಾಗುತ್ತಾ ಚರ್ವಿತ ಚರ್ವಣವಾಗುತ್ತಿದೆ.

ಜಾನಕಿಗೆ ತಂದೆ ತಾಯಿ ಇದ್ದರೂ ಜೊತೆಯಲ್ಲಿಲ್ಲ. ಮಧುಕರನಿಗೆ ತಾಯಿ ಇಲ್ಲ. ಸಿಎಸ್ಪಿಗೆ ಹೆಂಡತಿ ಇಲ್ಲ. ನಿರಂಜನನಿಗೆ ಹೆಂಡತಿ ಇದ್ದರೂ ಇಲ್ಲದಂತೆ. ದೇವಕಿಗೆ ಗಂಡ ಜೊತೆಯಲ್ಲಿಲ್ಲ. ತಂದೆ ತಾಯಿ ಇಲ್ಲ. ಭಾರ್ಗಿ ಹಾಗೂ ರಶ್ಮಿಗೆ ಹೊಂದಾಣಿಕೆ ಇಲ್ಲ. ಸಂಜನಾಳ ಗಂಡ ಓಡಿಹೋಗಿದ್ದಾನೆ. ಆನಂದ ಬೆಳಗೂರ್ ಪ್ರೀತಿಸಿದ ಹುಡುಗಿಯ ಜೊತೆ ಮದುವೆ ಆಗಲಿಲ್ಲ. ಶ್ಯಾಮಲಾಳ ಗಂಡ ಅಪ್ರಯೋಜಕ. ಪ್ರಸಿದ್ಧ ಲಾಯರ್ ಸಿಎಸ್ಪಿ ಮಗನ ಬಗ್ಗೆ ಅಗತ್ಯಕ್ಕಿಂತ ಜಾಸ್ತಿ ಭಾವುಕರಾಗುತ್ತಾರೆ. ನಿರ್ದೇಶಕರು ಇಂತಹ ಋಣಾತ್ಮಕ ಪಾತ್ರಗಳನ್ನಿಟ್ಟುಕೊಂಡು ವೀಕ್ಷಕರ ಅನುಕಂಪ ಗಳಿಸುತ್ತಿದ್ದಾರಾ ?

—ಹಿ.ಶಾ. ಸುಬ್ರಹ್ಮಣ್ಯ ಬೆಂಗಳೂರು

ಉಲ್ಟಾಪಲ್ಟಾ: ಮಗಳು ಜಾನಕಿ ಸೆಪ್ಟೆಂಬರ್ 9ರಂದು ಸೋಮವಾರ ಪ್ರಸಾರವಾದ ಸಂಚಿಕೆಯಲ್ಲಿ ಮೈತ್ರಿ ಮಹಾನಂದ ಧರಿಸಿದ ಬ್ಲಾಡ್ಜ್ ತಲೆಕೆಳಗಾಗಿದೆ. ಶೂಟಿಂಗ್‌ಗೆ ಬರುವ ಅವಸರದಲ್ಲಿ ಈ ಪ್ರಮಾದ ಗಮನಕ್ಕೆ ಬರಲಿಲ್ಲವೆಂದು ತೋರುತ್ತದೆ.

—ಶೌರಿ ಕಾರಂತ, ಬೆಂಗಳೂರು